**ದಿನಾಂಕ 12-05-2021 ರಂದು ಮಧ್ಯಾಹ್ನ 3.00 ಗಂಟೆಗೆ ನಡೆದ ವಾರ್ಡ್ ಸಮಿತಿಯ ಸಭೆಯ ನಡವಳಿಗಳು,**

**ಸಭೆಯಲ್ಲಿ ಹಾಜರಿದ್ದವರು**

| ಕ್ರ.ಸಂ | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| 1 | ಹನುಮಂತರಾಯಪ್ಪ | ವಾರ್ಡ್ ನೋಡಲ್ ಅಧಿಕಾರಿ (ಎ.ಇ.ಇ) | 8105005285 |
| 2 | ಲಕ್ಷ್ಮಿ | ವಾರ್ ರೂಂ ನೋಡಲ್ ಅಧಿಕಾರಿ (ಸ.ಕಂ.ಅ) | 7892757079 |
| 3 | ಡಾ॥ಯೋಗೇಶ್ | ಪ್ರಾ.ಆ.ಕೇಂ (ವೈದ್ಯರು) | 9242832196 |
| 4 | ಹೊನ್ನೂರ್ ಬಾಷ | ಕಿರಿಯ ಆರೋಗ್ಯ ಪರಿವೀಕ್ಷಕರು | 9945145661 |
| 5 | ಅಬ್ದುಲ್‌ರೆಹಮಾನ್ ಬಾಲೇಬಾಯಿ | ಕಂದಾಯ ಪರಿವೀಕ್ಷಕರು | 9164404390 |
| 6 | ಸೋಮಶೇಖರ್ | ಕಂದಾಯ ಪರಿವೀಕ್ಷಕರು | 9481725577 |
| 7 | ನಟರಾಜ್ | ಕಂದಾಯ ವಸೂಲಿಗಾರರು | 9448574662 |
| 8 | ರಮೇಶ್ | ಕಂದಾಯ ವಸೂಲಿಗಾರರು | 9980480549 |
| 9 | ಮುನಿರಾಜು | ಕಂದಾಯ ವಸೂಲಿಗಾರರು | 9731734619 |
| 10 | ಸುರೇಶ್ ರೆಡ್ಡಿ | ಸದಸ್ಯರು | 9900388075 |
| 11 | ಚಂದ್ರರೆಡ್ಡಿ | ಸದಸ್ಯರು | 9980480549 |
| 12 | ಗೋಪಿನಾಥ್ | ಸದಸ್ಯರು | 9243111520 |
| 13 | ಟಿ.ಎ.ಮೌಲ್ಲಾ ಸಾಬ್ | ಸದಸ್ಯರು | 9900034140 |
| 14 | ಅಮಿತ್ ರಾಜ್ | ಸ್ವಯಂ ಸೇವಕರು | 9986789143 |
| 15 | ಲಕ್ಷ್ಮಿಪತಿ | ಸ್ವಯಂ ಸೇವಕರು | 9845717498 |
| 16 | ಎಸ್.ಸೂರ್ಯನಾರಾಯಣ | ಸ್ವಯಂ ಸೇವಕರು | 9148097322 |
| 17 | ಗಣೇಶ್ | ಸ್ವಯಂ ಸೇವಕರು | 9740907161 |

- ವಾರ್ಡ್ ನೋಡಲ್ ಅಧಿಕಾರಿರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ/ನೌಕರರನ್ನು ಹಾಗೂ ಸದಸ್ಯರನ್ನು ಸಭೆಗೆ ಸ್ವಗತಿಸುತ್ತಾ ಮಾನ್ಯ ಆಯುಕ್ತರವರ ಆದೇಶದಂತೆ ಈ ಹಿಂದೆ ಇದ್ದ ವಾರ್ಡ್ ಸಮಿತಿಯನ್ನು ಈಗ ವಾರ್ಡ್ Deter committee ಎಂದು ಮಾಡಲಾಗಿದೆ.
- ಸದರಿ ಸಮಿತಿಯ ಸದಸ್ಯರುಗಳು ತಮ್ಮ ವಾರ್ಡ್ ವ್ಯಾಪ್ತಿಯ ಸ್ವಯಂಸೇವಕರು ಸಹಾಕರದೊಂದಿಗೆ ಸಾರ್ವಜನಿಕರಲ್ಲಿ ಕೋವಿಡ್ ಲಕ್ಷಣಗಳ ಬಗ್ಗೆ ತಿಳುವಳಿಕೆ ನೀಡುವುದರ ಮೂಲಕ ಹೆಚ್ಚಿನ ವಿಶ್ವಾಸ ಮೂಡಿಸಿ, ಆಸ್ಪತ್ರೆಗಳ ಹೊರೆಯನ್ನು ಕಡಿಮೆ ಮಾಡಲು ಕ್ರಮ ವಹಿಸಲು ಸದಸ್ಯರಿಗೆ ಅಧ್ಯಕ್ಷರು/ ನೋಡಲ್ ಅಧಿಕಾರಿ ಕೋರಿದರೂ.
- ಕೋವಿಡ್ ಸೋಂಕಿತರ ಸಮಸ್ಯೆ/ಕುಂದುಕೊರತೆಗಳನ್ನು ವಾರ್ಡ್ ಮಟ್ಟದಲ್ಲಿಯೇ ಪರಿಹರಿಸಲು ಕ್ರಮವಹಿಸಬೇಕೆಂದು ಸಭೆಯಲ್ಲಿ ಎಲ್ಲಾ ಸದಸ್ಯರು ಕೋರಿದರೂ. ಕ್ರಮ ವಹಿಸಲಾಗುವುದೆಂದು ನೋಡಲ್ ಅಧಿಕಾರಿಗಳು ತಿಳಿಸಿದರೂ.
- ವಾರ್ಡ್ ವ್ಯಾಪ್ತಿಯಲ್ಲಿ ನಿವೃತ್ತಿ ವೈದ್ಯರು, ಆರೋಗ್ಯ ಪರಿಣಿತರು, ಖಾಸಗಿ ಕ್ಲಿನಿಕ್‌ಗಳ ವೈದ್ಯರು ನರ್ಸ್‌ಗಳನ್ನು ಪತ್ತೆ ಮಾಡಿ ಅವರ ದೂರವಾಣಿ ಸಂಖ್ಯೆ ಮತ್ತು ವಿಳಾಸಗಳನ್ನು ಕ್ರೋಢಿಕರಿಸಿ ಸೋಂಕಿತರಿರಗೆ ಒದಗಿಸುವಂತೆ ಸಭೆಯಲ್ಲಿ ಸದಸ್ಯರುಗಳಿಗೆ ಅಧ್ಯಕ್ಷರು ಕೋರಿದರೂ.

Scanned with

- ಒಂದು ವೇಳೆ ಕೋವಿಡ್ ಸೋಂಕಿತರು ಮನೆಯಲ್ಲಿ ಪ್ರತ್ಯೇಕವಾಗಿರಲು ಸಾಧ್ಯವಿಲ್ಲದಿದ್ದಲ್ಲಿ ಕೋವಿಡ್ ಕೇರ್ ಸೆಂಟರ್‌ಗೆ ಸೇರಿಸಲು ಸಹಕಾರ ನೀಡುವಂತೆ ಸದಸ್ಯರನ್ನು ನೋಡಲ್ ಅಧಿಕಾರಿ ಕೋರಿದರೂ.
- ಸಾರ್ವಜನಿಕರಲ್ಲಿ ಕೋವಿಡ್ ಲಸಿಕೆ ಬಗ್ಗೆ ಹೆಚ್ಚಿನ ಅರಿವು ಮೂಡಿಸಿ, 45ವರ್ಷ ಮೇಲ್ಪಟ್ಟವರಿಗೆ ಲಸಿಕೆ ಪಡೆಯಲು ಜನರು ಮುಗಿಬೀಳದಂತೆ ವ್ಯವಸ್ಥಿತ ರೀತಿಯಲ್ಲಿ ಲಸಿಕೆ ನೀಡಲು ಪಾಲಿಕೆ ವೈದ್ಯರ/ನರ್ಸ್‌ಗಳ ಸಹಾಕರ ನೀಡಲು ಸದಸ್ಯರು ಕೋರಿದರೂ. ಹಾಜರಿದ್ದ ವೈದ್ಯರು ಕ್ರಮ ವಹಿಸಲಾಗುವುದೆಂದು ಸಭೆಗೆ ತಿಳಿಸಿದರೂ.
- ಸೋಂಕಿತರು ಮೃತಪಟ್ಟಲ್ಲಿ Hearse van ವ್ಯವಸ್ಥೆ ಮಾಡಿ ಶವಸಂಸ್ಕಾರಕ್ಕೆ ಅನುಕೂಲ ಮಾಡಲು ಸಹಕರಿಸುವುದು ಎಂದು ವಾರ್ಡ್ ನೋಡಲ್ ಅಧಿಕಾರವರು ಸಭೆಗೆ ತಿಳಿಸಿದರು.
- ಶ್ರೀ.ಸುರೇಶ್ ರೆಡ್ಡಿರವರು ಮಾತನಾಡಿ ಮಂಗಮ್ಮನಪಾಳ್ಯ ವ್ಯಾಪ್ತಿಯ ಲಕ್ಷ್ಮಿ ಬಡಾವಣೆ, ಗಾರ್ವೇಭಾವಿಪಾಳ್ಯದಲ್ಲಿ ಸರಿಯಾಗಿ ಕೋವಿಡ್ ಲಸಿಕೆ ನೀಡಿಲ್ಲ ಈ ಬಗ್ಗೆ ಎರಡು, ಮೂರು ದಿನಗಳಲ್ಲಿ ಕ್ರಮವಹಿಸಿ ಲಕ್ಷ್ಮಿ ಬಡಾವಣೆನಲ್ಲಿಯೇ ಕೋವಿಡ್ ಲಸಿಕೆ ನೀಡುವಂತೆ ಸಭೆಗೆ ಕೋರಿದರು. ಕ್ರಮ ವಹಿಸಲು ಡಾ|| ಯೋಗೇಶ್ ರವರಿಗೆ ಅಧ್ಯಕ್ಷರು ಸುಚಿಸಿದರೂ.
- ವಾರ್ಡ್ 190 ರಲ್ಲಿ ಎಷ್ಟು ಕೋವಿಡ್ ಸೋಂಕಿತರಿದ್ದಾರೆ, ಎಷ್ಟು ಜನ ಮೃತಪಟ್ಟಿದ್ದಾರೆ ಹಾಗೂ ಕೋವಿಡ್ ಸೋಂಕಿತರ ತಪಾಸಣೆ, ಅವರಿಗೆ ಅಗತ್ಯವಿರುವ ವೈದ್ಯಕೀಯ ಕಿಟ್ ನೀಡಿರುವ ಬಗ್ಗೆ ವಾರ್ಡ್ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯರಾದ, ಶ್ರೀ.ಯೋಗೇಶ್ ರವರಿಗೆ ನೋಡಲ್ ಅಧಿಕಾರಿಗಳು ರವರು ಸೂಚಿಸಿದರೂ ಸಭೆಯಲ್ಲಿ ಹಾಜರಿದ್ದ ಡಾ|| ಯೋಗೇಶ್ ರವರು ಮಾಹಿತಿ ನೀಡುವುದಾತಿ ತಿಳಿಸಿದರೂ.
- ಡಾ||ಯೋಗೇಶ್‌ರವರು ಈ ಕುರಿತು ವಿವರಿಸುತ್ತಾ ವಾರ್ಡ್ 190ರಲ್ಲಿ ಪ್ರತಿ ನಿತ್ಯ ಹೋಮ್ ಐಸ್ಸೋಲೆಷನ್ ಪ್ರಕರಣಗಳಿಗೆ ಬೇಟಿ ಮಾಡಿ ಕೋವಿಡ್ ಸೋಂಕಿತರ ತಪಾಸಣೆ ಮಾಡಿ ಅವರಿಗೆ ಅವಶ್ಯವಿರುವ ವೈದ್ಯಕೀಯ ಕಿಟ್‌ಗಳನ್ನು ನೀಡಲಾಗಿದೆ ಹಾಗೂ ಸದರಿ ವಾರ್ಡ್‌ನಲ್ಲಿ ಈವರೆಗೆ 5 Micro containment zone ಮಾಡಲಾಗಿತ್ತು ಈಗ 2 ಅನ್ನು ತೆಗೆಯಲಾಗಿದ್ದು 3 Micro containment zone ಮಾತ್ರ ಇರುತ್ತದೆ ಎಂದು ಸಭೆಗೆ ತಿಳಿಸಿದರೂ.
- ಈಗ ಕೋವಿಡ್ ಲಸಿಕೆ ನೀಡಲು ಯಾವುದೇ ಕ್ಯಾಂಪ್‌ಗಳನ್ನು ಮಾಡುವಂತಿಲ್ಲ ಆದ ಕಾರಣ ವಾರ್ಡ್ 190 ಐ.ಟಿ.ಐ ಬಡಾವಣೆಯಲ್ಲಿರುವ Top palace ನಲ್ಲಿ ಕೋವಿಡ್ ಲಸಿಕೆಯನ್ನು ನೀಡಲಾಗುತ್ತಿದೆ ಹಾಗೂ ಪ್ರಸುತ್ತ ಲಸಿಕೆಯ ಕೊರತೆ ಇದ್ದು ಪ್ರತಿನಿತ್ಯ ಲಸಿಕೆ ನೀಡಲು ಸ್ಟಾಕ್ ಕೊರತೆ ಇರುವ ಕಾರಣ ಸ್ಟಾಕ್ ಲಭ್ಯತೆ ಅನುಗುಣವಾಗಿ ಲಸಿಕೆ ನೀಡಲಾಗುತ್ತಿದೆ ಎಂದು ಡಾ||ಯೋಗೇಶ್‌ರವರು ಸಭೆಗೆ ತಿಳಿಸಿದರು.
- ಮುಂದುವರೆದು ಹಾಲಿ ಸರ್ಕಾರವ ಆದೇಶದಂತೆ 45ವರ್ಷ ಮೇಲ್ಪಟ್ಟವರಿಗೆ 2ನೇ ಹಂತದ ಕೋವಿಡ್ ಲಸಿಕೆಯನ್ನು ಮಾತ್ರ ನೀಡಬೇಕಾಗಿದ್ದು ಆದರಂತೆ ಕ್ರಮವಹಿಸಲು ಸಹಕರಿಸಬೇಕೆಂದು ಸಬೆಯಲ್ಲಿ ಹಾಜರಿದ್ದ ಡಾ|| ಯೋಗೇಶ್ ಕೋರಿದರೂ.

Scanned with

- ವಾರ್ಡ್ 190ರಲ್ಲಿ ಕಳೆದ 2 ತಿಂಗಳಿಂದ ಕೋವಿಡ್ ಲಸಿಕೆಯನ್ನು ನೀಡಲಾಗುತ್ತಿದ್ದು ವಿವಿಧ ಸ್ಥಳಗಳಲ್ಲಿ ಕ್ಯಾಂಪ್ ಮಾಡಿ ಈ ಹಿಂದೆ ಲಸಿಕೆ ನೀಡಲಾಗಿದೆ ಆದರೆ ಇದರ ಬಗ್ಗೆ ಮಾಹಿತಿಯನ್ನು ಹಾಗೂ ಸಭೆಯಲ್ಲಿ ಕೋರಲಾದ ಮಾಹಿತಿಯನ್ನು ಇನ್ನೆರಡು ಮೂರು ದಿನಗಳಲ್ಲಿ ನೀಡುವುದಾಗಿ ಡಾ॥ ಯೋಗೇಶ್ ತಿಳಿಸಿದರೂ. ಕ್ರಮ ವಹಿಸಲು ಡಾ॥ ಯೋಗೇಶ್ ರವರಿಗೆ ನೋಡಲ್ ಅಧಿಕಾರಿ ತಿಳಿಸಿದರೂ.
- ವಾರ್ಡ್ 190 ರಲ್ಲಿ ಕಳೆದ ಬಾರಿ ಕೋವಿಡ್ ಸೋಂಕಿತರನ್ನು ಗುರುತಿಸಲು ಕ್ಯಾಂಪ್‌ಗಳನ್ನು ಮಾಡಿ ಕೋವಿಡ್ ಪರೀಕ್ಷೆ ಮಾಡಲಾಗುತ್ತಿತ್ತು ಆದರಂತೆ ಈ ಬಾರಿಯೂ ಕೋವಿಡ್ ಪರೀಕ್ಷೆ ಮಾಡಲು ಸುರೇಶ್ ರೆಡ್ಡಿ ರವರು ಸಭೆಗೆ ತಿಳಿಸಿದರೂ.
- ವಾರ್ಡ್ 190ಕ್ಕೆ ನೀಡಲಾಗಿರುವ 2 ಅಂಬ್ಯುಲೆನ್ಸ್ ಇವರ ವಿವರವನ್ನು ನೀಡಲು ಹಾಗೂ ಸದರಿ ವಾಹನಗಳು ವಾರ್ಡ್ ವಾರ್ ರೂಂನ ಬಳಿ ಇರಬೇಕು ಅಗತ್ಯವಿದ್ದ ತುರ್ತು ಪರಿಸ್ಥಿತಿಯಲ್ಲಿ ಉಪಯೋಗಿಸಲು ಅನುಕೂಲವಾಗುವುದಾಗಿ ಸುರೇಶ್ ರೆಡ್ಡಿರವರು ಮತ್ತು ಗೋಪಿನಾಥ್ ರವರು ಸಭೆಗೆ ತಿಳಿಸಿದರೂ.
- ಶ್ರೀ.ಗೋಪಿನಾಥ್‌ರವರು ಮಾತನಾಡಿ ಕೋವಿಡ್ ಸೋಂಕಿತರ Temperature ಎಷ್ಟು ಇರಬೇಕು ಹಾಗೂ Saturation ಎಷ್ಟು ಇರಬೇಕು ಎಂದು ತಿಳಿಸಲು ಡಾ॥ಯೋಗೇಶ್ ರವರಿಗೆ ಕೋರಿದರೂ ಇದಕ್ಕೆ ಡಾ॥ ಯೋಗೇಶ್ ನಾನು ಎಲ್ಲಾ ಮಾಹಿತಿಯನ್ನು ಪಟ್ಟಿಮಾಡಿ ವಾಟ್ಸ್ ಆಫ್ ಗ್ರೂಪ್‌ನಲ್ಲಿ ಹಂಚಿಕೊಳ್ಳುವುದಾಗಿ ಸಭೆಯಲ್ಲಿ ತಿಳಿಸಿ ಎಲ್ಲ ಸದಸ್ಯರು ಸೋಂಕಿತರಿಗೆ ಸುಲಭವಾಗಿ ಅರ್ಥ ಮಾಡಲಾಗುವುದೆಂದು ತಿಳಿಸಿದರೂ.

ಮೇಲ್ಕಂಡ ವಿಷಯಗಳನ್ನು ಚರ್ಚಿಸುತ್ತಾ ಹಾಲಿ ಕೋವಿಡ್ ಲಿಸಿಕೆಗೆ ಹೆಚ್ಚಿನ ಅವಶ್ಯಕತೆ ಇರುವ ಕಾರಣ ಕೋವಿಡ್ ಲಸಿಕೆ ಬೇಡಿಕೆಯನ್ನು ಪೂರೈಸಲು ಮೇಲಾಧಿಕಾರಿಗಳ ಗಮನಕ್ಕೆ ತರಲು ಕ್ರಮವಹಿಸುವುದಾಗಿ ತಿಳಿಸುತ್ತಾ ನೋಡಲ್ ಅಧಿಕಾರಿಯವರು ಸಭೆಗೆ ವಂದನೆಗಳನ್ನು ತಿಳಿಸಿ ಸಭೆಯನ್ನು ಮುಕ್ತಾಯಗೊಳಿಸಿದ್ದರು.

ನೋಡಲ್ ಅಧಿಕಾರಿ
ವಾರ್ಡ್ 190–ಮಂಗಮ್ಮನಪಾಳ್ಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

Scanned with